ಹೆಜ್ಜೆಗಾರಿಕೆಯೊಂದಿಗೆ ಬ್ಯಾಲೆಗಳನ್ನು ಪ್ರಸ್ತುತಪಡಿಸುವ ಶೈಲಿಯನ್ನು ಕಂಡು ನಾನು ನಿಜಕ್ಕೂ ವಿಸ್ಮಯಗೊಂಡಿದ್ದೆ. ಅವರೆಲ್ಲರೂ ಅದ್ಭುತ ನೃತ್ಯಪಟುಗಳು ಎಂಬುದು ಅಷ್ಟೇ ಸತ್ಯ.

ಲಂಡನ್‌ನಲ್ಲಿ ಇಬ್ಬರು ಪ್ರಸಿದ್ಧ ಸ್ಪ್ಯಾನಿಷ್ ನೃತ್ಯಪಟುಗಳು ಪ್ರದರ್ಶಿಸಿದ್ದ ಸ್ಪ್ಯಾನಿಷ್ ನೃತ್ಯವನ್ನು ನೋಡಿದೆ. ಅವರು ಸ್ಪೇನ್‌ನ ಪ್ರಸಿದ್ಧ ನೃತ್ಯ ದಂಪತಿಯಾಗಿದ್ದರು. ಅವರು ತಮ್ಮ ಶೂಗಳನ್ನು ನೆಲಕ್ಕೆ ಬಡಿಯುತ್ತ ವಿಭಿನ್ನವಾದ ಲಯವನ್ನು ಸೃಷ್ಟಿಸಿ ಪ್ರೇಕ್ಷಕರನ್ನು ಸೆಳೆದಿದ್ದರು. ಪ್ರೇಕ್ಷಕರನ್ನು ಸೆಳೆದುಕೊಳ್ಳುವ ಆ ತಂತ್ರವು ಬಹಳ ಆಕರ್ಷಕವಾಗಿತ್ತು. ಆದರೆ ಕಥಕ್ ನೃತ್ಯಪಟುಗಳು ಪಾಪ ತಮ್ಮ ಪಾದಗಳನ್ನೇ ನೆಲಕ್ಕೆ ಬಡಿಯಬೇಕಿತ್ತಲ್ಲ.

ಇದೇ ಮಾದರಿಯ ಜನಪದ ನೃತ್ಯವೊಂದನ್ನು ಸ್ವೀಡನ್‌ನಲ್ಲಿ ನೋಡಿದೆ. ಆ ನೃತ್ಯದಲ್ಲಿ ಹೆಚ್ಚು ವೈವಿಧ್ಯಮಯವಾದ ಚಲನೆಗಳಿರಲಿಲ್ಲ. ಆದರೆ ಅವರ ದಿರಿಸು ಸುಂದರವಾಗಿ, ಆಕರ್ಷಕವಾಗಿತ್ತು, ಅವರು ಗುಂಪಾಗಿ ಹೆಜ್ಜೆ ಹಾಕುವ ವಿಧಾನಗಳನ್ನು ಸಾಕಷ್ಟು ಅಭ್ಯಾಸ ಮಾಡಿ ಏಕರೂಪತೆಯನ್ನು ತಂದುಕೊಂಡಿದ್ದರು. ಆ ಕಾಲಕ್ಕೆ ರಷ್ಯಾವು ಯುರೋಪ್‌ನ ಇತರ ದೇಶಗಳಿಂದ ತನ್ನನ್ನು ತಾನು ಪ್ರತ್ಯೇಕಿಸಿಕೊಂಡಿತ್ತು. ಆದರೆ ನಾವು ರಷ್ಯಾಕ್ಕೆ ತೆರಳಿ ಅಲ್ಲಿ ಮಾಸ್ಕೋದಲ್ಲಿ ಮತ್ತು ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಪ್ರದರ್ಶನಗಳನ್ನು ನೀಡಿದೆವು. ಜರ್ಮನಿಗೆ ಕೂಡ ತೆರಳಿ ಪ್ರದರ್ಶನ ನೀಡಿದ್ದು ನೆನಪಿದೆ. ನಾವು ಹೋದ ಸಂದರ್ಭದಲ್ಲಿ ಅಲ್ಲಿನ ಹೆಚ್ಚಿನ ಕಟ್ಟಡಗಳು ಬಾಂಬ್ ದಾಳಿಯಿಂದ ವಿರೂಪಗೊಂಡಿದ್ದವು. ಅವುಗಳಿಗೆ ಅಲ್ಲಲ್ಲಿ ಆಧಾರಗಳನ್ನು ಕೊಟ್ಟು ನಿಲ್ಲಿಸಲಾಗಿತ್ತು. ಚರ್ಚುಗಳಷ್ಟೇ ಸುಸ್ಥಿತಿಯಲ್ಲಿ ಗಂಭೀರವಾಗಿ ನಿಂತಿದ್ದವು. ಎಲ್ಲವೂ ಯುದ್ಧದ ಫಲ.

ಆ ಸಭಾಂಗಣ ಕಿಕ್ಕಿರಿದು ತುಂಬಿದ್ದು, ನಮ್ಮ ಪ್ರದರ್ಶನವನ್ನು ಪ್ರೇಕ್ಷಕರು ತುಂಬಾ ಇಷ್ಟಪಟ್ಟರು. ಯುದ್ಧದ ಸನ್ನಿವೇಶಗಳನ್ನು ನೋಡಿ, ಬರೀ ಬೂದು ಬಣ್ಣದ ದೂಳು, ಹೊಗೆಯನ್ನೇ ಕಂಡು ಸುಸ್ತಾಗಿದ್ದ ಜನರು ಭಾರತೀಯ ಉಡುಪಿನ ವೈವಿಧ್ಯಮಯ ಬಣ್ಣಗಳನ್ನು ನೋಡಿ ಸಂತಸಪಟ್ಟರು. ಪ್ರದರ್ಶನದ ಕೊನೆಗೆ ಅವರು ಮತ್ತೆ ಮತ್ತೆ ಇಂತಹ ಪ್ರದರ್ಶನಗಳನ್ನು ಏರ್ಪಡಿಸುವಂತೆ ಮನವಿ ಮಾಡಿಕೊಂಡರು. ಅವೆಲ್ಲ ಖುಷಿಯ ಸಂಗತಿಗಳು. ಆದರೆ ಆ ಸಂದರ್ಭದಲ್ಲಿ ನಾನು ಮಾಡಿದ ಪ್ರಯಾಣಗಳು ನನ್ನಲ್ಲಿ ಬೇಸರದ ನೆನಪುಗಳನ್ನೂ ಅಚ್ಚೊತ್ತಿವೆ. ಅವತ್ತು ನನಗೆ ವೇಷಭೂಷಣಗಳನ್ನು ಧರಿಸಲು ನೆರವಾಗಲು ಬಂದ ಮಹಿಳೆಯು ತನ್ನ ದುಃಖದ ಕಥೆ ಹೇಳಿಕೊಂಡಳು. ಅವಳು ಯುದ್ಧದಲ್ಲಿ ಪತಿಯನ್ನು ಕಳೆದುಕೊಂಡಿದ್ದಳು. ಪುಟ್ಟ ಮಗನನ್ನು ಅವಳೇ ದುಡಿದು ಸಾಕುವುದು ಕಷ್ಟವಾಗಿತ್ತು. ಅವಳು ನಿಲ್ಲಲು ನೆಲೆಯಿಲ್ಲದೆ, ಉಣ್ಣಲು ಆಹಾರವಿಲ್ಲದೆ ಕಂಗಾಲಾಗಿದ್ದಳು. ನಾವು ಜರ್ಮನಿಗೆ ರೈಲಿನಲ್ಲಿ ಹೋಗುವಾಗ ಮತ್ತೊಂದು ಭೀಕರ ದೃಶ್ಯ ನೋಡಿದೆ. ಆಗೆಲ್ಲ ತ್ಯಾಜ್ಯವಿಲೇವಾರಿಯ ಕ್ರಮಗಳಿನ್ನೂ ಇರಲಿಲ್ಲ. ರೈಲಿನ ಪ್ಯಾಂಟ್ರಿಯಿಂದ ಸಿಬ್ಬಂದಿ ಅಳಿದುಳಿದ ಆಹಾರವನ್ನು ಹೊರಕ್ಕೆ ಎಸೆದುಬಿಡುತ್ತಿದ್ದರು. ಹಾಗೆ ರೈಲಿನಿಂದ ಹಾರಿ ಬರುವ ಆಹಾರದ ಚೂರುಗಳಿಗಾಗಿ ಹುಡುಗರ ಗುಂಪು ರೈಲಿನ ಬೋಗಿಗಳತ್ತ ಓಡೋಡಿ ಬರುತ್ತಿತ್ತು. ಇವನ್ನೆಲ್ಲ ಸುಮ್ಮನೇ ನೋಡುತ್ತಿದ್ದ ನನಗೆ – ಜಗತ್ತು ಎಂದರೆ ಏನು, ಹಸಿವು ಎಂದರೇನು ಎಂಬ ಅರಿವಾಗುತ್ತಿತ್ತು. ಅವು ತುಂಬಾ ಭಾವನಾತ್ಮಕ ಕ್ಷಣಗಳಾಗಿದ್ದವು. ಬದುಕಿನಲ್ಲಿ ಏನು ಬೇಕಿದ್ದರೂ ಆಗಬಹುದು ಎಂಬ ಅರಿವು ಮೂಡಿದಾಗ, ಅದು ನಮ್ಮ ಸೃಜನಶೀಲ ಕ್ರಿಯೆಗಳ ಮೇಲೆಯೂ ಪರಿಣಾಮ ಬೀರುತ್ತದೆ. ನನ್ನನ್ನು ನಾನೇ ಆ ರೀತಿಯಲ್ಲಿ ಗಮನಿಸಿಕೊಂಡಿದ್ದೇನೆ.

**◆ ಕಥಕ್ ನೃತ್ಯಕ್ಕೆ ಕೊರಿಯೊಗ್ರಫಿಯನ್ನು ಪರಿಚಯಿಸಿದ ನೀವು, ನೃತ್ಯ ಪ್ರಸ್ತುತಿಯ ಒಟ್ಟಂದವನ್ನೇ ಮೇಲೆತ್ತಿದ್ದೀರಿ. ಹೊಸ ಪರಿಕಲ್ಪನೆಗಳನ್ನು ನೀವು ಹೆಣೆದ ಬಗೆ ಹೇಗೆ?**

ನಮ್ಮ ದೇಶದ ಯಾವುದೇ ನೃತ್ಯ ಪ್ರಕಾರದಲ್ಲಿ ಕೊರಿಯೊಗ್ರಫಿ ಎಂಬ ಪರಿಕಲ್ಪನೆಯೊಂದಿರಲಿಲ್ಲ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಒಂದು ನೃತ್ಯಪ್ರಕಾರಕ್ಕೆ ಕೊರಿಯೊಗ್ರಫಿಯನ್ನು ಹೇಗೆ ಮಾಡಬೇಕು ಎಂಬುದನ್ನು ಪ್ರತ್ಯೇಕ ವಿಷಯವನ್ನಾಗಿ ಕಲಿಸುವ ಪರಿಪಾಠವಿತ್ತು. ರಚನೆ, ಅಂತರ, ವಿನ್ಯಾಸ, ಚಲನೆ, ಸಮಯ ಸಂದರ್ಭ ಮತ್ತು ವಿವಿಧ ರೀತಿಯ ನಿರ್ದೇಶನಗಳು, ಪ್ರೇಕ್ಷಕರೊಡನೆ ಸಂಪರ್ಕ... ಎಲ್ಲದಕ್ಕಿಂತ ಮುಖ್ಯವಾಗಿ